ಕೊಂಡು ಬಂದಿದ್ದಾರೆ. 240 ದಿವಸಗಳ ಕಾಲ ಕೆಲಸಮಾಡಿದ್ದರೆ ಖಾಯಂ ಮಾಡಬಹುದೆಂಬ ಬಗ್ಗೆ ಹೈಕೋರ್ಟಿನ ತೀರ್ಮಾನ ಇರುವುದು ನನಗೆ ಗೊತ್ತಿದೆ. ಆದರೆ ಇವರುಗಳು ಸತತವಾಗಿ 240 ದಿವಸಗಳ ವರೆಗೆ ಕೆಲಸಮಾಡಿಲ್ಲ. ಮಾನವೀಯತೆ ದೃಷ್ಟಿ ಇಟ್ಟುಕೊಂಡು ಇವರುಗಳನ್ನು ಕೆಲಸದಲ್ಲಿ ಮುಂದುವರೆಸ ಲಾಗಿದೆ. ಈ ಹಿಂದೆ ಯಾವುದೋ ಕೆಲಸಕ್ಕೆಂದು ಇವರನ್ನು ನೇಮಕಮಾಡಿಕೊಳ್ಳಲಾಯಿತು. ನಂತರ 90 ದಿವಸಗಳ ನಂತರ ಕೆಲಸದಿಂದ ತೆಗೆದು ಮತ್ತೆ ಕೆಲಸ ಒದಗಿಸಲಾಗುತ್ತಿದೆ. ಯಾವುದೇ ಕಾರಣ ದಿಂದಲೂ ಇವರನ್ನು ಕೆಲಸದಿಂದ ತೆಗೆಯಬಾರದೆಂದು ಅರಣ್ಯ ಕೈಗಾರಿಕಾ ನಿಗಮದವರಿಗೆ ಆದೇಶ ನೀಡ ಲಾಗಿದೆ. ಅಷ್ಟೇ ಅಲ್ಲ, ನಮಗೆ ಸಾಕಷ್ಟು ಕಟ್ಟಿಗೆಸಿಗದಿದ್ದರೂ ಸಹ 54 ಡಿಪೋಗಳ ಮೂಲಕ ಜನರಿಗೆ ಏನು ಕಟ್ಟಿಗೆ ಸರಬರಾಜು ಮಾಡಲಾಗುತ್ತಿದೆ, ಅವುಗಳನ್ನು ಮುಚ್ಚದೆ ಇವರಿಗೆ ಕೆಲಸ ಒದಗಿಸುವ ದೃಷ್ಟಿ ಯಿಂದ ಮುಂದುವರಿಸಿಕೊಂಡು ಹೋಗುತ್ತೇವೆ, ಅವಕಾಶ ಸಿಕ್ಕಿದಂತೆಲ್ಲಾ ಇವರನ್ನು ಖಾಯಂ ಮಾಡ ಲಾಗುತ್ತದೆ. ಇದರ ಜೊತೆಗೆ ಸಾಮಾಜಿಕ ಅರಣ್ಯ ಯೋಜನೆಯ ಅಡಿಯಲ್ಲಿ ಕೆಲಸ ಮಾಡಲು ಜನರನ್ನು ಕೆಲಸಕ್ಕೆ ತೆಗೆದುಕೊಳ್ಳುವಾಗ ಇವರೂ ಸಹ ಅಲ್ಲಿನ ರೆಕ್ರೂಟ್‌ಮೆಂಟ್ ಕಮಿಟಿ ಮುಂದೆ ಇಂಟರ್‌ವ್ಯೂಗೆ ಹೋಗಿ ಆಯ್ಕೆಗೊಳ್ಳಲು ಅವಕಾಶವಿದೆ.

ವಿಷಯ : ಉತ್ತರ ಕನ್ನಡ ಜಿಲ್ಲೆಯಲ್ಲಿ ಅರಣ್ಯ ಜಮೀನಿನ ಒತ್ತುವರಿ.

ಪ್ರಶ್ನೆ ಸಂಖ್ಯೆ. 676 (1698) ಶ್ರೀ ಆರ್. ವಿ. ದೇಶಪಾಂಡೆ (ಹಳಿಯಾಳ) ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

(ಅ) 1-4-1978ಕ್ಕಿಂತ ಹಿಂದೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಅತಿಕ್ರಮಣ ಮಾಡಿದ ಅರಣ್ಯ ಜಮೀನು ಎಷ್ಟು ;

(ಆ) 1-4-1978ಕ್ಕಿಂತ ಹಿಂದಿನ ಅರಣ್ಯ ಭೂಮಿಯ ಅತಿಕ್ರಮಣಗಳನ್ನು ಸಕ್ರಮಗೊಳಿಸಲು ಪ್ರಸ್ತಾವನೆ ಏನಾದರೂ ಸರ್ಕಾರದ ಮುಂದಿದೆಯೆ ;

(ಇ) ಹಾಗಿದ್ದಲ್ಲಿ ಸರ್ಕಾರದವರು ಇದರ ಬಗ್ಗೆ ತೆಗೆದುಕೊಂಡಿರುವ ಕ್ರಮವೇನು ?

ಶ್ರೀ ಬಿ. ಎ. ಜೀವಿಜಯ (ಅರಣ್ಯ ಮಂತ್ರಿಗಳು).—

(ಅ) 3429.92 ಹೆಕ್ಟೇರುಗಳು.

(ಆ) ಹೌದು.

(ಇ) ಅರಣ್ಯ ಸಂರಕ್ಷಣಾ ಅಧಿನಿಯಮದ ಕೆಳಗೆ ಭಾರತ ಸರ್ಕಾರದವರನ್ನು ಅತಿಕ್ರಮಣವನ್ನು ಸಕ್ರಮಗೊಳಿಸುವ ಬಗ್ಗೆ ಸಲಹೆಯನ್ನು ಕೋರಲಾಗಿದೆ.

ಪ್ರಶ್ನೆ : 1698. ಅಧ್ಯಕ್ಷರು :—ಮಾನ್ಯ ಸದಸ್ಯರಿಂದ ಇದಕ್ಕೆ ಉಪಪ್ರಶ್ನೆಗಳು ಇಲ್ಲ.

ವಿಷಯ : ಸವದತ್ತಿ ತಾಲ್ಲೂಕಿನ ಕೆಲವು ಗ್ರಾಮಗಳಿಗೆ ಯಾತ ನೀರಾವರಿ ಸೌಲಭ್ಯ ಒದಗಿಸುವ ಬಗ್ಗೆ

ಪ್ರ. ಸಂಖ್ಯೆ 677 1354) ಶ್ರೀ ಆರ್. ಪಾಟೀಲ (ಪರಸಗಡ) ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ :—

(ಅ) ಸವದತ್ತಿ ತಾಲ್ಲೂಕಿನಲ್ಲಿ ಗೋರಬಾಳ, ಶಿರಸಂಗಿ ಮತ್ತು ಬಸಿದೋಣಿ ಗ್ರಾಮಗಳಿಗೆ ಏತ ನೀರಾವರಿ ಸೌಲಭ್ಯವನ್ನೊದಗಿಸುವ ವಿಷಯ ಸರ್ಕಾರದವರ ಗಮನದಲ್ಲಿದೆಯೇ ;

(ಆ) ಹಾಗಿದ್ದಲ್ಲಿ ಅದನ್ನು ಯಾವಾಗ ಕಾರ್ಯಗತ ಮಾಡಲಾಗುವುದು ;

(ಇ) ಸವದತ್ತಿ ತಾಲ್ಲೂಕಿನ ಬಡ್ಲಿ ಕಾತ್ರಳ ಗ್ರಾಮಗಳು ಮುಳುಗಡೆ ನಕ್ಷೆಯಲ್ಲಿ ಬಂದಿದ್ದು, ಅವು ಗಳಿಗೆ ಯಾತ ನೀರಾವರಿ ಸೌಲಭ್ಯವನ್ನೊದಗಿಸಲು ಸರಕಾರದವರು ಕೈಕೊಂಡಿರುವ ಕ್ರಮವೇನು ?

ಶ್ರೀ ಎಚ್. ಡಿ. ದೇವೇಗೌಡ : (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).

(ಅ) ಇಲ್ಲ.

(ಆ) ಉದ್ಭವಿಸುವುದಿಲ್ಲ.

(ಇ) ಸರ್ಕಾರದವರ ಪರಿಶೀಲನೆಯಲ್ಲಿದೆ.

ಶ್ರೀ ಆರ್. ವಿ. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಸವದತ್ತಿ ತಾಲ್ಲೂಕಿನ ಗೋರಬಾಳ ಮತ್ತು ಶಿರಸಂಗಿ ಮತ್ತು ಬಸಿದೋಣಿ ಗ್ರಾಮಗಳಿಗೆ ಏತ ನೀರಾವರಿ ಯೋಜನೆಗೆ ಸಂಬಂಧಪಟ್ಟ ಹಾಗೆ ನಾನು ಪ್ರಶ್ನೆಯನ್ನು ಕೇಳಿದ್ದೆ. ಅದಕ್ಕೆ ಮಾನ್ಯ ಮಂತ್ರಿಗಳು ಇಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ಆದರೆ ಮೈನರ್ ಇರಿಗೇಷನ್ ಸ್ಕೀಮ್ ಏನಿದೆ ಅದನ್ನು ಮತ್ತು ಲಿಫ್ಟ್ ಇರಿಗೇಷನ್ ಸ್ಕೀಮ್‌ನ್ನು 1984-85ನೇ ಸಾಲಿನ ಬಡ್ಜೆಟ್‌ನಲ್ಲಿ ಮಂಜೂರು ಮಾಡಿದ್ದಾರೆ. ಇದು ಹೇಗೆ ?

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ ಸುಮಾರು 113.25 ಗುಂಟೆ ಜಮೀನಿಗೆ ಸಂಬಂಧಪಟ್ಟಿರತಕ್ಕಂಥದ್ದು. ಆದರೆ ಮಾನ್ಯ ಸದಸ್ಯರು ಕೇಳಿರತಕ್ಕಂಥ ಪ್ರಶ್ನೆ 4 ಸಾವಿರ ಎಕರೆಗೆ ನೀರಾವರಿಯನ್ನು ಒದಗಿಸಿಕೊಡುವ ಬಗ್ಗೆ. ಆದರಲ್ಲಿ ಮಾನ್ಯ ಸದಸ್ಯರು ಶಿರಸಂಗಿ ಬಸಿದೋಣಿ ಇತ್ಯಾದಿ ಗ್ರಾಮಗಳನ್ನು ತೆಗೆದುಕೊಳ್ಳಬೇಕೆಂದು ಕೇಳಿದ್ದಾರೆ. ಆದರೆ ಆ ಬಗ್ಗೆ ಸರ್ಕಾರ ಪರಿಶೀಲನೆ ಮಾಡುತ್ತಿದೆ. ಆದರೆ ನಾವು ಆ ಬಗ್ಗೆ ವರ್ಕ್ ಆಫ್ ಮಾಡಿ ನೋಡುತ್ತಿದ್ದೇವೆ. ಅದು ಸಾಧ್ಯವಿಲ್ಲವೆಂದು ನಮಗೆ ಕಂಡು ಬರುತ್ತಿದೆ. ಅಲ್ಲಿ ಕೆಲಸ ಪ್ರಾರಂಭ ಮಾಡಿದರೆ ಸೈಪನ್ ಬರುತ್ತದೆ. ಅಲ್ಲಿ ಇರತಕ್ಕಂಥ ಕೆಪ್ಯಾಸಿಟಿ ಬಹಳ ಕಡಿಮೆ ಇದೆ ಸುಮಾರು 4 ಸಾವಿರ ಎಕರೆಗೆ ನೀರು ಡಿಸ್‌ಚಾರ್ಜ್ ಮಾಡುವಂಥ ಕೆಪ್ಯಾಸಿಟಿ ಇಲ್ಲ. ಅಲ್ಲಿ ಲೀಕೇಜ್ ಸಹ ಇದೆ. ಮತ್ತೆ ಅಲ್ಲಿ ಜಾಕ್‌ವೆಲ್ ಹಾಕಿ ನೋಡಿದರೂ ಕೂಡ ಪ್ರಯೋಜನವಾಗುತ್ತಿಲ್ಲ. ಅಲ್ಲಿ ಸುಮಾರು 44 ಟಿ.ಎಂ.ಸಿ. ನೀರು ಉಪಯೋಗಿಸಿಕೊಳ್ಳಬೇಕೆಂದು ಇದ್ದರು ಸಹ ನಾವು ಸುಮಾರು 48 ಟಿ.ಎಂ.ಸಿ. ನೀರನ್ನು ಉಪಯೋಗ ಮಾಡಿಕೊಳ್ಳುತ್ತಿದ್ದೇವೆ. ಆದ್ದರಿಂದ ನಾವು ಈ ಸ್ಕೀಮ್ ತೆಗೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಈಗ ನಾವು ಎರಡು ಯೋಜನೆಗಳನ್ನು ಮಾಡಿದ್ದೇವೆ. ಅಲ್ಲಿ ನೀರನ್ನು ನೀರಾವರಿಗೆ ಉಪಯೋಗಿಸಿಕೊಳ್ಳಬೇಕೇ ಅಥವಾ ವಿದ್ಯುತ್‌ಶಕ್ತಿಗೆ ಉಪಯೋಗಿಸಿಕೊಳ್ಳಬೇಕೇ ಎಂದು. ಆದ್ದರಿಂದ ಸದ್ಯದ ಪರಿಸ್ಥಿತಿಯಲ್ಲಿ ನಾನು ಯಾವುದೇ ನಿಖರವಾದಂಥ ಉತ್ತರ ಹೇಳುವುದಕ್ಕೆ ಆಗುವುದಿಲ್ಲ.

ಶ್ರೀ ಆರ್. ವಿ. ಪಾಟೀಲ್.—ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳು 1984-85ನೇ ಸಾಲಿನಲ್ಲಿ ಮಂಜೂರು ಮಾಡಲಾಗಿದೆಯೆಂದು ತಿಳಿಸಿದ್ದಾರೆ. ನಾವು ನಮ್ಮ ಕ್ಷೇತ್ರಕ್ಕೆ ಹೋದಾಗ ರೈತರು ನಮ್ಮನ್ನು ಕೇಳುತ್ತಾರೆ. ಆಗ ನಾವು ರೈತರಿಗೆ ಏನು ಉತ್ತರ ಹೇಳಬೇಕು ?

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಆಗಲೇ ಉತ್ತರ ಹೇಳಿದ್ದಾರೆ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಹೇಳಿದ ಹಾಗೆ ಆ ಭಾಗದ ಜನರು ಒತ್ತಾಯ ಮಾಡುತ್ತಿದ್ದಾರೆ. ಆದ್ದರಿಂದ ನಾನು ಕೂಡ ಸ್ಥಳ ಪರೀಕ್ಷೆ ಮಾಡಿಕೊಂಡು ಬಂದಿದ್ದೇನೆ. ಅಲ್ಲಿ ನಾವು ಈಗಾಗಲೇ ಒಂದು ಟೆಕ್ನಿಕಲ್ ಕಮಿಟಿಯನ್ನು ಮಾಡಿದ್ದೇವೆ ; ಅವರು ಒಂದು ಹಂತದಲ್ಲಿ ಇದನ್ನು ಪರಿಶೀಲನೆ ಮಾಡುತ್ತಿದ್ದಾರೆ. ಆದರೆ ಆ ನೀರನ್ನು ನಾವು ನೀರಾವರಿಗೆ ಉಪಯೋಗಿಸಿಕೊಳ್ಳಬೇಕೇ ಅಥವಾ ವಿದ್ಯುಚ್ಛಕ್ತಿಗೆ ಉಪಯೋಗಿಸಿಕೊಳ್ಳಬೇಕೇ ಎನ್ನುವ ಬಗ್ಗೆ ಒಂದು ತೀರ್ಮಾನಕ್ಕೆ ನಾವು ಆದಷ್ಟು ಬರಬೇಕಾಗುತ್ತದೆ.

ಶ್ರೀ ಆರ್. ವಿ. ಪಾಟೀಲ್.—ಮಾನ್ಯ ಅಧ್ಯಕ್ಷರೇ ನನ್ನ (ಇ) ಪ್ರಶ್ನೆಗೆ ಮಾನ್ಯ ಮಂತ್ರಿಗಳು ಉತ್ತರ ಕೊಟ್ಟ ರೀತಿಯನ್ನು ನೋಡಿದರೆ, ಅದನ್ನು ಯಾವಾಗ ಚಾಲು ಮಾಡುತ್ತಾರೆಂದು ಹೇಳುವುದಕ್ಕೆ ಆಗುತ್ತದೆಯೇ ?

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ, ನಾವು ಈಗಾಗಲೇ ಸುಮಾರು 56 ಲಕ್ಷ ರೂಪಾಯಿಗಳ ಒಂದು ಎಸ್ಟಿಮೇಟ್ ತಯಾರು ಮಾಡಿದ್ದೇವೆ. ಆ ನೀರನ್ನು ಯಾವ ರೀತಿ ಉಪಯೋಗಿಸಿಕೊಳ್ಳಬೇಕು ಎನ್ನುವುದು ಪರಿಶೀಲನಾ ಹಂತದಲ್ಲಿ ಇದೆ. ಅಲ್ಲಿ ನಾವು ಸುಮಾರು 0.104 ಟಿ.ಎಂ.ಸಿ. ನೀರನ್ನು ಉಪಯೋಗಿಸಿಕೊಳ್ಳಬಹುದು.

ವಿಷಯ : ಮಹಿಳಾ ಮಂಡಳಿಗಳಿಗೆ ಧನಸಹಾಯದ ಬಗ್ಗೆ

ಪ್ರಶ್ನೆಯ ಸಂಖ್ಯೆ 678 (1692). ಶ್ರೀ ಬಿ. ಜಿ. ಬಣಕಾರ್, (ಹಿರೇಕೆರೂರು) ಶ್ರೀ ಬಿ. ಜಿ. ಪಾಟೀಲ್ (ರಾಣೆಬೆನ್ನೂರು) ಶ್ರೀ ಬಿ. ಜ್ಞಾನದೇವ ದೊಡ್ಡಮೇಟಿ, (ಶೀರಾ) ಮತ್ತು ಶ್ರೀ ಗೂಳಪ್ಪ ಉಪನಾಳ (ಶಿರಹಟ್ಟಿ).—

ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

(ಅ) ಕೇಂದ್ರ ಸರ್ಕಾರದಿಂದ ರಾಜ್ಯದಲ್ಲಿಯ ಮಹಿಳಾ ಮಂಡಳಿಗಳ ಸ್ಥಾಪನೆಗಾಗಿ ಬಿಡುಗಡೆ ಮಾಡಿದ ಸಹಾಯ ಧನವನ್ನು ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು ಮಹಿಳಾ ಮಂಡಳಿಗೆ ಕೊಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ;

(ಆ) ಇದರಿಂದ ಅಂಗನವಾಡಿ ಯೋಜನೆಯನ್ನು ಕಾರ್ಯಗತ ಮಾಡುವಲ್ಲಿ ತೊಂದರೆಯಾಗಿರುವುದು ಸರಕಾರದವರ ಗಮನಕ್ಕೆ ಬಂದಿದೆಯೆ ;

(ಇ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮವೇನು ?

ಶ್ರೀಮತಿ ಚಂದ್ರಪ್ರಭಾ ಅರಸ್ : (ಸಮಾಜ ಕಲ್ಯಾಣ ಹಾಗೂ ರೇಷ್ಮೆ ಇಲಾಖೆಯ ಸಚಿವೆಯರು)

(ಅ) ಇಲ್ಲ.